ತೋರಗೊಡದೆ 'ಎಂ.ಎಲ್.ಎ. ಗೊಟುಕ್ ಅಂದಿದ್ರಿಂದ ಎಲೆಕ್ಷನ್ ಆಗ್ತ ಐತೆ ಮೇಷ್ಟ್ರೆ. ನಿಮ್ದೊಳ್ಳೆ ಪಂಚಾಯ್ತಿ ಆಯ್ತಲ್ಲ. ಬೈ ಎಲೆಕ್ಷನ್ ಡಿಕ್ಲೇರ್ ಮಾಡಿರೋದು ಎಲೆಕ್ಷನ್ ಕಮಿಷನರು. ಎಲೆಕ್ಷನ್ ನಿಮ್ಗೆ ಬೇಡ ಅಂದ್ರೆ ಎಲೆಕ್ಷನ್ ಕಮಿಷನ್‌ಗೆ ಕಾಗ್ದ ಬರ್ದಾಕಿ. ಇಲ್ಲಾಂದ್ರೆ ಎಲೆಕ್ಷನ್ ದಿನ ನೀವೂ ವಸಿ ಹಾಕ್ಕೊಂಡು ಮುದ್ದೆ ತಿಂದು ಕಣ್ಮುಚ್ಕಂಡು ನಿದ್ದೆ ಹೋಗ್ಬಿಡಿ, ಯಂಗೂ ಎಪ್ಪತ್ತೊರ್ಷ ತುಂಬೋಯ್ತು. ನೀವು ಓಟು ಹಾಕಿಲ್ಲ ಅಂತ ಯಾರೂ ಅಳ್ತ ಬಾಯಿ ಬಡ್ಕಂಬಲ್ಲ...' ಎಂದು ಹೇಳಿ ಕಾರು ಹತ್ತಿದ್ದ. ಯಾವ ಯಾವ ಪಾರ್ಟಿಯವರು ಎಷ್ಟೆಷ್ಟು ದುಡ್ಡು ಕೊಡ್ತಾರೆ, ಎಷ್ಟೆಟ್ಟು ಬಾಟ್ಲು ವಿಸ್ಕಿ ರಮ್ಮು ಕೊಡ್ತಾರೆ ಎಂಬ ಲೆಕ್ಕಾಚಾರಗಳಲ್ಲಿ ಜನ ಮುಳುಗಿದ್ದರು. ಕರಿಯನಿಮಪ್ಪನ ಮಗ ಎಮ್ಕೆ ಗಾಂಧಿಯೂ ಪಕ್ಷವೊಂದರ ಲೋಕಲ್ ಲೀಡರ್ ಆಗಿದ್ದು ಊರಿನಲ್ಲಿ ಚುನಾವಣೆಯ ಮುಂದಾಳತ್ವವನ್ನು ವಹಿಸಿಕೊಂಡು ಹಗಲು ಇರುಳೆನ್ನದೆ ಓಡಾಡುತ್ತಿದ್ದ.

ಈ ಎಲ್ಲಾ ವಿದ್ಯಾಮಾನಗಳನ್ನೂ ಕೇರಿಯಲ್ಲಿ ಓಡಾಡಿಕೊಂಡು ಜಗಲಿಯ ಮೇಲೆ ಕುಳಿತುಕೊಂಡು ಕರಿಯನುಮಪ್ಪ ಕಿವಿ ತುಂಬಿಸಿಕೊಳ್ಳುತ್ತಿದ್ದ. ಗತಿಸಿಹೋಗಿದ್ದ ಸಂಭ್ರಮದ ದಿನಗಳು ಕಣ್ಣ ಮುಂದೆ ಕುಣಿಯ ತೊಡಗಿದ್ದವು. ಆಗಿನ್ನೂ ದೇಶಕ್ಕೆ ಸ್ವಾತಂತ್ರ್ಯ ಬಂದಿರಲಿಲ್ಲ. ಕರಿಯನುಮಪ್ಪ ಮಿಡ್ಲಿಸ್ಕೂಲು ಪಾಸು ಮಾಡಿ ಅಪ್ಪನೊಂದಿಗೆ ಬೇಸಾಯ ಮಾಡಿಕೊಂಡಿದ್ದ. ಯುವಕನಾಗಿ ಬೆಳೆದಂತೆ ಊರಿನಲ್ಲಿ ಒಳ್ಳೆಯ ಹೆಸರನ್ನು ಗಳಿಸಿದ. ಗಾಂಧಿಯ ಸ್ವಾತಂತ್ರ್ಯ ಚಳವಳಿಯ ಬಗ್ಗೆ ಆಸಕ್ತಿ ಬೆಳೆಸಿಕೊಂಡ. ಜಿಲ್ಲಾ ಕೇಂದ್ರಕ್ಕೆ ಗಾಂಧಿ ಬಂದಾಗ ತಾನೂ ಹೋಗಿ ದರ್ಶನ ಮಾಡಿಕೊಂಡು ಬಂದಿದ್ದ. ತಾಲ್ಲೂಕು ಕೇಂದ್ರದಲ್ಲಿ ಆಯೋಜಿಸಿದ್ದ ಹೋರಾಟದಲ್ಲಿ ಪಾಲ್ಗೊಂಡು ತಾಲ್ಲೂಕು ಕಚೇರಿಯ ಮೇಲೆ ಹಾರಾಡುತ್ತಿದ್ದ ಬ್ರಿಟಿಷ್ ಧ್ವಜವನ್ನು ಹರಿದು ಹಾಕಿ ಜೈಲಿಗೂ ಹೋಗಿದ್ದ. ಆದರೆ ಮೂರೇ ತಿಂಗಳಲ್ಲಿ ದೇಶಕ್ಕೆ ಸ್ವಾತಂತ್ರ್ಯ ಬಂದು ಜೈಲಿನಿಂದ ಬಿಡುಗಡೆಯಾಗಿ ಊರಿಗೆ ಮರಳಿದ್ದ. ಊರಿನ ಯುವಕರೆಲ್ಲ ಸೇರಿ ಕರಿಯನುಮಪ್ಪನನ್ನು ಮೆರವಣಿಗೆ ಮಾಡಿ ಸಂಭ್ರಮಿಸಿದ್ದರಲ್ಲದೆ ಸ್ವಾತಂತ್ರ್ಯ ಹೋರಾಟಗಾರನೆಂದು ಕೊಂಡಾಡಿದ್ದರು. ಮದುವೆಯನ್ನು ಮಾಡಿಕೊಂಡ ಕರಿಯನುಮಪ್ಪ ಶ್ರದ್ಧೆಯಿಂದ ಬೇಸಾಯದಲ್ಲಿ ತೊಡಗಿಸಿಕೊಂಡಿದ್ದ. ಸುತ್ತಮುತ್ತಲ ಊರುಗಳಲ್ಲಿಯೂ ಕರಿಯನುಮಪ್ಪನ ಮಾತಿಗೆ ಬೆಲೆಯಿತ್ತು. ಸ್ವಾತಂತ್ರ್ಯ ಹೋರಾಟಗಾರನೆಂದು ರಾಜಕೀಯಕ್ಕೆ ಇಳಿಯಲು ಕೂಡ ಆಹ್ವಾನ ಬಂದಿತ್ತು. ಆದರೆ ಕರಿಯನುಮಪ್ಪ ತಿರಸ್ಕರಿಸಿದ್ದ. ಹುಟ್ಟಿದ ಮಗನಿಗೆ 'ಗಾಂಧಿ' ಎಂದೇ ಹೆಸರಿಟ್ಟ. ಸ್ಕೂಲಿಗೆ ಸೇರಿಸುವಾಗ ಮೇಷ್ಟು ಕರಿಯನುಮಪ್ಪನ ಮಗನ ಹೆಸರನ್ನು ಎಂ.ಕೆ. ಗಾಂಧಿ ಎಂದು ರಿಜಿಸ್ಟರಿನಲ್ಲಿ ದಾಖಲಿಸಿಕೊಂಡಿದ್ದರು. ಎಂ.ಕೆ. ಗಾಂಧಿ ಎಂದರೆ ಮೇಗಳ ಮನೆಯ ಕರಿಯನುಮಪ್ಪನ ಮಗ ಗಾಂಧಿ ಎಂಬುದಾಗಿತ್ತು ಮೇಷ್ಟ್ರ ಇಂಗಿತ. ಊರಿನ ಜನರ ಬಾಯಲ್ಲಿ ಎಂ.ಕೆ. ಗಾಂಧಿಯ 'ಎಮ್ಕೆ' 'ಎಮ್ಕೆ' ಎಂದು ಉಚ್ಛಾರವಾಗತೊಡಗಿತ್ತು. ಎಮ್ಕೆ ಗಾಂಧಿಗೆ ವಿದ್ಯೆ ಹತ್ತಲಿಲ್ಲ. ಬೇಸಾಯಕ್ಕೆ ಇಳಿದ. ಕರಿಯನುಮಪ್ಪ ಸ್ವಂತ ಅಕ್ಕನ ಮಗಳನ್ನೆ ಮಗನಿಗೆ ಮದುವೆ ಮಾಡಿಕೊಂಡು ಬಂದಿದ್ದ. ಸೊಸೆ ಅನುಸೂಯಮ್ಮ ಮೊದಲಿನಿಂದಲೂ ಮಾವನನ್ನು ತುಂಬಾ ಮುತುವರ್ಜಿಯಿಂದಲೇ ನೋಡಿಕೊಂಡು ಬಂದಿದ್ದಳು. ಆದರೆ ಮಗ ಎಂ.ಕೆ. ಗಾಂಧಿ ಮಾತ್ರ ತನ್ನ ನಿರೀಕ್ಷೆಯಂತೆ ಬೆಳೆಯಲಿಲ್ಲ. ಸಿಗರೇಟು ಸೇದುವುದು, ಮದ್ಯಪಾನ ಮಾಡುವುದನ್ನು ಕದ್ದು ಕಲಿತುಕೊಂಡಿದ್ದ. ಮಾಂಸದೂಟದಲ್ಲಿ ಎಕ್ಸ್‌ಪರ್ಟ್ ಆಗಿ ಎಂಥ ಎಮಕೆಗಳ (ಮೂಳೆ)ನ್ನಾದರೂ ಕಡಿದು ಪುಡಿ ಪುಡಿ ಮಾಡುತ್ತಿದ್ದ. ಊರಿನ ಕೆಲವರು 'ನಿನ್ ಮಗನಿಗೆ